ಸ್ವಾಮಿ ವಿವೇಕಾನಂದರು ತಮ್ಮ ಸಹಜೀವಿಗಳ ಹಾಗೂ ದೇಶದ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದರು. ಅವುಗಳನ್ನು ಕಾರ್ಯಗತಗೊಳಿಸಲು ಹಣದ ಅಗತ್ಯವಿತ್ತು. ಅದಕ್ಕಾಗಿ ಧನ ಸಂಗ್ರಹಿಸಲು ಅವರು ಅನೇಕ ರೀತಿ ಕಷ್ಟಪಡುತ್ತಿದ್ದರು. ಆದರೂ ಶ್ರೀಮಾತೆಯವರ ತಮ್ಮ ಅಭಯಚರಣ ವೈದ್ಯಕೀಯ ವಿದ್ಯಾಭ್ಯಾಸ ಮಾಡುತ್ತಿರುವನೆಂದು ತಿಳಿದು, ಅವನಿಗೂ ತಮ್ಮ ಸಹಾಯಹಸ್ತ ನೀಡಿದರು.

ಹೀಗೆ ತಾಯಿಯ ಹೆಮ್ಮೆಯ ವರಪುತ್ರನಾಗಿ ನರೇಂದ್ರ ಜವಾಬ್ದಾರಿಯ ನೊಗಕ್ಕೆ ಹೆಗಲನ್ನು ಕೊಟ್ಟ ಎಷ್ಟೋ ಪ್ರಸಂಗಗಳು ಶ್ರೀಮಾತೆಯ ನೆನಪಿನಂಗಳದಿ ಬೆಳದಿಂಗಳಾಗಿ ಹರಡಿವೆ.

**ಲೋಕಗುರುವಾಗಿ :** ಶ್ರೀರಾಮಕೃಷ್ಣರ ಸಂದೇಶವನ್ನು ಲೋಕದಲ್ಲಿ ಹರಡಲು ಇದ್ದ ಸದವಕಾಶ ವಿಶ್ವಧರ್ಮ ಸಮ್ಮೇಳನ. ಅದರಲ್ಲಿ ಭಾಗವಹಿಸಲು ಗುರುದೇವರ ಅನುಮತಿಯಿದೆ ಎಂದು ಸ್ವಾಮಿ ವಿವೇಕಾನಂದರು ಒಂದು ದೃಶ್ಯದ ಮೂಲಕ ಕಂಡಿದ್ದರು. ಆದರೂ ಮನಸ್ಸು ಗೊಂದಲಗೊಂಡಿತು; ಹೋಗಬೇಕೇ ಬೇಡವೇ ಎಂದು ನಿಶ್ಚಯಿಸಲಾರದೆ ತೊಳಲಾಡುತ್ತಿತ್ತು. ಆಗ ಸ್ವಾಮಿ ವಿವೇಕಾನಂದರು ಆಶೀರ್ವಾದಪೂರ್ವಕ ಅನುಮತಿ ಕೋರಿ ಶ್ರೀಮಾತೆಗೆ ಒಂದು ಪತ್ರ ಬರೆದರು. ಶ್ರೀಮಾತೆಯವರ ಮಾತೃವಾತ್ಸಲ್ಯ ಹೊರದೇಶಕ್ಕೆ ಅವರನ್ನು ಕಳಿಸಿಕೊಡಲು ಅಂಜಿತು. ಸ್ವಾಮಿ ವಿವೇಕಾನಂದರ ವ್ಯಕ್ತಿತ್ವ, ಸಾಮರ್ಥ್ಯ, ಅವರಿಂದ ಆಗಬೇಕಾದ ಮಹಾಕಾರ್ಯ – ಈ ಎಲ್ಲವನ್ನೂ ತಿಳಿದಿದ್ದರೂ, ಕಂಡರಿಯದ ಯಾವುದೋ ದೂರ ದೇಶಕ್ಕೆ ಪ್ರೀತಿಪಾತ್ರ ಪುತ್ರನನ್ನು ಕಳಿಸಲು ತಾಯಿ ಹೃದಯಕ್ಕೆ ಏನೋ ಕಳವಳ. ಆದರೆ ಕರ್ತವ್ಯ ಆಶೀರ್ವದಿಸಿ ಕಳಿಸುವಂತೆ ಹೇಳುತ್ತಿತ್ತು. ಈ ಹೋರಾಟದಲ್ಲಿ ಪ್ರತಿಬಾರಿಯೂ, 'ಮಾತೃಹೃದಯ'ವೇ ಗೆಲ್ಲುತ್ತಿತ್ತು. ಹೀಗೆ ಅವರು ದ್ವಂದ್ವದಲ್ಲಿ ತೊಳಲಾಡುತ್ತಿದ್ದಾಗ, ಶ್ರೀರಾಮಕೃಷ್ಣರು ಅವರ ಸಹಾಯಕ್ಕೆ ಬಂದರು. ಶ್ರೀರಾಮಕೃಷ್ಣರು ಸಮುದ್ರದ ಮೇಲೆ ನಡೆದುಕೊಂಡು ಹೋಗುತ್ತ, ಸ್ವಾಮೀಜಿಯವರನ್ನು ಕರೆಯುತ್ತಿದ್ದ ದೃಶ್ಯವನ್ನು ಶ್ರೀಮಾತೆ ಕಂಡರು. ಈಗ 'ಮಾತೃ ಹೃದಯ' ಕರ್ತವ್ಯಕ್ಕೆ ಜಾಗ ಬಿಟ್ಟುಕೊಟ್ಟಿತು. ಶ್ರೀಮಾತೆ ಸ್ವಾಮೀಜಿಗೆ ಆಶೀರ್ವಾದಪೂರ್ವಕ ಅನುಮತಿ ಕೊಟ್ಟರು.

ಪಾಶ್ಚಾತ್ಯ ದೇಶಗಳಲ್ಲಿ ಅದ್ಭುತ ಜಯಗಳಿಸಿ ಏಳು ವರ್ಷಗಳ ನಂತರ ಸ್ವಾಮೀಜಿ ತಮ್ಮೆಡೆಗೆ ಬಂದಾಗ, ತಾಯಿಗೆ ಎಂತಹ ಆನಂದದ ಘಳಿಗೆ ! ಸ್ವಾಮೀಜಿಗೂ, ತನ್ನ ಹೆತ್ತ ತಾಯಿಯನ್ನು ನೋಡುವುದಕ್ಕಿಂತ ಮಿಗಿಲಾಗಿ ಜಗನ್ಮಾತೆಯ ದರ್ಶನ ಮಾಡುವ ತವಕ! ಸ್ವಾಮೀಜಿ ಶ್ರೀಮಾತೆಯ ಬಳಿಬಂದು ದೂರದಿಂದಲೇ ನಮಸ್ಕರಿಸಿ, ಮೌನದಿಂದಲೇ ಎಲ್ಲವನ್ನೂ ಅವರಿಗೆ ಒಪ್ಪಿಸಿದರು. ಮೊದಲು ಶ್ರೀಮಾತೆ, ಗೋಲಾಪ್ ಮಾ ಮುಖಾಂತರ ಸಂಭಾಷಣೆ ಮಾಡುತ್ತಾರೆ, ಸ್ವಾಮೀಜಿಯವರ ಕ್ಷೇಮ ಸಮಾಚಾರ ಕೇಳುತ್ತಾರೆ. "ಠಾಕುರ್ ಸದಾ ನಿನ್ನ ರಕ್ಷಣೆಗೆ ಇದ್ದಾರೆ. ನೀನು ಲೋಕಹಿತಕ್ಕಾಗಿ ಬಹಳ ಕೆಲಸ ಮಾಡಬೇಕಿದೆ" ಎಂದು ಹೇಳುತ್ತಾರೆ. ಸ್ವಾಮೀಜಿ, "ವಿದೇಶದಲ್ಲಿ ನಡೆದುದು ಪಡೆದುದು ಎಲ್ಲಾ ನಿಮ್ಮ ಕೃಪೆಯಿಂದ, ಆದುದೆಲ್ಲಾ ನಿಮ್ಮ ಪವಾಡವೇ" ಎಂದು ಹೇಳುತ್ತಾರೆ. ಆಗ ಶ್ರೀಮಾತೆ ನೇರವಾಗಿ ಸ್ವಾಮೀಜಿಗೆ, "ನೀನು ಮಾಡುತ್ತಿರುವ ಎಲ್ಲ ಕೆಲಸವೂ ಶಾಶ್ವತವಾಗಿರುವ ಕೆಲಸ. ಅದನ್ನು ಮಾಡಲಿಕ್ಕಾಗಿಯೇ ನೀನು ಬಂದಿರುವುದು. ವಿಶ್ವವೆಲ್ಲಾ ನಿನ್ನನ್ನು 'ಲೋಕಗುರು' ಎಂದು ಕೊಂಡಾಡುತ್ತದೆ. ಆಧ್ಯಾತ್ಮಿಕ ಜ್ಞಾನವನ್ನು ಕರುಣಿಸುವವನು ನೀನು. ನಿನ್ನ ಎಲ್ಲಾ ಸಂಕಲ್ಪಗಳೂ ಬಹಳ ಬೇಗನೇ ಸಿದ್ಧಿಪ್ರದವಾಗುತ್ತವೆ ಎಂದು ನಾನು ಭರವಸೆ ಕೊಡುತ್ತೇನೆ" ಎಂದು ಆಶೀರ್ವದಿಸುತ್ತಾರೆ.

**ಸಂಘದ ನಾಯಕನಾಗಿ :** ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣರ ಸಂದೇಶಗಳನ್ನು ಅನುಷ್ಠಾನ ಮಾಡಲು, ಅದನ್ನು ಜನರಿಗೆ ತಲುಪಿಸಲು ಒಂದು ಸಂಘದ ಆವಶ್ಯಕತೆಯಿದೆ ಎಂದು ಮನಗಂಡರು. ಅದಕ್ಕಾಗಿ **'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ'** ಎಂಬ ಧ್ಯೇಯದೊಡಗೂಡಿದ ಒಂದು ಸಂಘವನ್ನು ಸ್ಥಾಪಿಸಿದರು. ಕೆಲವರಿಗೆ ಈ ಧ್ಯೇಯವಾಕ್ಯದಲ್ಲಿ ಔಚಿತ್ಯ ಕಾಣಲಿಲ್ಲ. ಆಸ್ಪತ್ರೆ ನಡೆಸುವುದು, ಪುಸ್ತಕ ಮಾರಾಟ ಮಾಡುವುದು, ಲೆಕ್ಕಪತ್ರ ಇಡುವುದು ಸಂನ್ಯಾಸಿ ಬದುಕಿಗೆ ಸರಿಹೋಗುವಂಥದಲ್ಲ ಎಂದು ಅವರಿಗೆ ಎನಿಸಿತು. ಶ್ರೀರಾಮಕೃಷ್ಣರು ಇದನ್ನೆಲ್ಲಾ ಏನೂ ಮಾಡಲಿಲ್ಲ, ಈ ಎಲ್ಲಾ ಕೆಲಸಗಳು ಮನುಷ್ಯನನ್ನು ದೇವರಿಂದ ದೂರ ಸರಿಸುತ್ತದೆ. ಸಂನ್ಯಾಸಿಯಾದವನು ಒಂದೆಡೆ ನಿಲ್ಲಬಾರದು. ಪರಿವ್ರಾಜಕನಾಗಿರಬೇಕು. ಅವನಿಗೆ ಧ್ಯಾನ ತಪಸ್ಸು ಮೊದಲಾದ ಸಾಧನೆಗಳ ಹೊರತು ಬೇರಾವ ಬಂಧನಗಳೂ ಇರಬಾರದು ಎನ್ನಿಸಿತು. ಈ ಅಂಶವನ್ನು ಅಂಥವರಲ್ಲಿ ಒಬ್ಬರು ಶ್ರೀಮಾತೆಯ ಗಮನಕ್ಕೆ ತಂದಾಗ ಅವರು ಹೀಗೆ ಹೇಳುತ್ತಾರೆ: "ಯಾವಾಗಲೂ ಜಪ ಧ್ಯಾನ ಮಾಡಲು ಎಷ್ಟು ಜನರಿಗೆ ಸಾಧ್ಯವಿದೆ?! ಆರಂಭದಲ್ಲಿ ಸ್ವಲ್ಪವೇ ಮಾಡಬೇಕು, ಇಲ್ಲದಿದ್ದರೆ ತಲೆ ಬಿಸಿಯಾಗುವುದು, ಅಹಂಕಾರ ಬೆಳೆಯುವುದು. ಅದು ಮುಂದಿನ ಎಲ್ಲಾ ಅಶಾಂತಿಗೆ ಕಾರಣವಾಗುವುದು. ಅದಕ್ಕೆ ಬದಲು ಮನಸ್ಸನ್ನು ವಿಹರಿಸಲು ಬಿಡದೆ, ಒಂದೆಡೆ ಹಿಡಿದಿಟ್ಟು ಏನಾದರೂ ಕೆಲಸದಲ್ಲಿ ತೊಡಗಿಸುವುದು ಒಳ್ಳೆಯದು. ಮನಸ್ಸು ಸಡಿಲವಾದರೆ ಏನೇನೋ ತೊಂದರೆಯುಂಟಾಗುವುದು. ನನ್ನ ನರೇನ್ ಇದನ್ನೆಲ್ಲಾ ನೋಡಿಯೇ ನಿಷ್ಕಾಮಕರ್ಮಕ್ಕೆ ಅಡಿಪಾಯ ಹಾಕಿದ್ದು; **'ಜಗದ್ಧಿತಾಯ ಚ'** ಲೋಕದ ಹಿತಕ್ಕಾಗಿ ದುಡಿಯಬೇಕೆಂಬುದನ್ನು ಸಂಘದ ಧ್ಯೇಯವನ್ನಾಗಿ ಮಾಡಿದ್ದು. ಸೇವಾಕಾರ್ಯ ಮಾಡುತ್ತಿರುವುದರಿಂದ ನಮಗೆಲ್ಲಾ ಊಟ ಸಿಗುತ್ತದೆ, ಅದಿಲ್ಲದಿದ್ದರೆ ಹಿಡಿ ಅನ್ನಕ್ಕಾಗಿ ಮನೆ ಮನೆ ಅಲೆಯಬೇಕಾಗುತ್ತಿತ್ತು. ನೋಡು, ನಾನು ಹೇಳುತ್ತೇನೆ, ಇವೆಲ್ಲವೂ ಶ್ರೀರಾಮಕೃಷ್ಣರು ಹೇಗೆ ಇಚ್ಛಿಸುತ್ತಾರೋ ಹಾಗೆಯೇ ನಡೆಯುತ್ತಿದೆ. ಈ ಮಠ ಈಗ ಹೇಗೆ ನಡೆದುಕೊಂಡು ಹೋಗುತ್ತಿದೆಯೋ ಮುಂದೆಯೂ ಹಾಗೆಯೇ ನಡೆದುಕೊಂಡು ಹೋಗುತ್ತದೆ."

ಮಾಯಾವತಿಯ ಅದ್ವೈತ ಆಶ್ರಮದಲ್ಲಿ ಸಂಪೂರ್ಣ ಅದ್ವೈತವನ್ನೇ ಅನುಷ್ಠಾನ ಮಾಡಬೇಕೆಂದು ಸ್ವಾಮಿ ವಿವೇಕಾನಂದರು ಕಟ್ಟಳೆ ಮಾಡಿದ್ದರು. ಅಲ್ಲಿ ಶ್ರೀರಾಮಕೃಷ್ಣರ ಫೋಟೋವನ್ನು ಪೂಜಿಸಬಾರದೆಂದು ಆಜ್ಞೆ ಮಾಡಿದ್ದರು. ಇದು ಕೆಲವರಿಗೆ ಒಪ್ಪಿಗೆಯಾಗಲಿಲ್ಲ. ಸರಿ, ಶ್ರೀಮಾತೆಯವರ ಬಳಿ ದೂರು ಬಂದಿತು. ಶ್ರೀಮಾತೆ ಹೇಳುತ್ತಾರೆ, "ಯಾರು ನಮ್ಮ ಗುರುವಾಗಿದ್ದಾರೋ ಅವರು ಸ್ವಯಂ ಅದ್ವೈತ ಸ್ವರೂಪರೇ, ಅವರ ಶಿಷ್ಯರಾದ ನೀವೆಲ್ಲಾ ಅದ್ವೈತಿಗಳೇ, ನಾನು ಖಂಡಿತವಾಗಿ ಹೇಳುತ್ತೇನೆ, ನೀವು ಅದ್ವೈತವಾದಿಗಳೆಂಬುದೇ ನಿಜ. ನನ್ನ ನರೇನ್ ಮಾಡಿರುವ ಕಟ್ಟಳೆ ಸರಿಯಾಗಿಯೇ ಇದೆ."

ಈ ರೀತಿ ಸಂಘದ ನಾಯಕನಾಗಿ ಕರ್ತವ್ಯ ನಿರ್ವಹಿಸುವಾಗ ಬಂದೊದಗುವ ಭಿನ್ನಾಭಿಪ್ರಾಯಗಳನ್ನು ಶಮನಗೊಳಿಸಿ, ಸ್ವಾಮಿ ವಿವೇಕಾನಂದರಿಗೆ ಬೆಂಗಾವಲಾಗಿ ಶ್ರೀಮಾತೆ ನಿಂತ ಪ್ರಸಂಗಗಳು ಅನೇಕ.

**ಯೋಗಿಯಾಗಿ :** ಸ್ವಾಮಿ ವಿವೇಕಾನಂದರದು ಅಸಾಧಾರಣ ವ್ಯಕ್ತಿತ್ವ, ಅಪ್ರತಿಮ ಛಲ. ಹಿಡಿದ ಕಾರ್ಯ ನೆರವೇರಿಸುವಲ್ಲಿ ಅಡ್ಡಿಗಳ ಬೆಟ್ಟವೇ ಬಂದೆರಗಿದರೂ, ಅಂಜುವ, ಬೆದರುವ ಸ್ವಭಾವವಲ್ಲ ಅವರದು; ಅಂತಹ ಕೆಚ್ಚೆದೆಯ ಧೀರತೆ! ಆದುದರಿಂದಲೇ ಶ್ರೀರಾಮಕೃಷ್ಣರು, ಅವರನ್ನು ಸಂಘದ ನಾಯಕರಾಗಿ ಇದ್ದು ಸೋದರರನ್ನು ಅಧ್ಯಾತ್ಮದ ಹಾದಿಯಲ್ಲಿ ಕೈಹಿಡಿದು ಮುನ್ನಡೆಸಬೇಕೆಂದು ಆಜ್ಞಾಪಿಸಿದರು. ಶ್ರೀರಾಮಕೃಷ್ಣರು ಶರೀರದಿಂದಿರುವಾಗಲೇ, ಸ್ವಾಮಿ ವಿವೇಕಾನಂದರು ಅನೇಕ ದಿವ್ಯದರ್ಶನಗಳನ್ನು ಪಡೆದಿದ್ದರು. ಅವರನ್ನು ಕಾಡಿ ನಿರ್ವಿಕಲ್ಪ ಸಮಾಧಿಯ ಆನಂದವನ್ನು ಅನುಭವಿಸಿದರು, ಶ್ರೀಮಾತೆ ಹೇಳುತ್ತಾರೆ, "ಭಾವದಿಂದಲೇ ಎಲ್ಲಾ ಲಭ್ಯವಾಗುವುದು; ಭಾವವಿಲ್ಲದೆ, ಯಾರು ತಾನೆ ಭಗವಂತನನ್ನು ನೋಡಿದ್ದಾರೆ, ಅವನೊಂದಿಗೆ ಮಾತನಾಡಿದ್ದಾರೆ?! ಭಾವದಲ್ಲೇ ಭಗವಂತನ ದರ್ಶನ. ಸಶರೀರವಾಗಿ ಭಗವಂತನ ದರ್ಶನ ಮಾಡುವುದು ಅತ್ಯಂತ ಅದೃಷ್ಟದ ವಿಚಾರ. ನರೇಂದ್ರನಿಗೆ ಶ್ರೀರಾಮಕೃಷ್ಣರ ಅನುಗ್ರಹದಿಂದ ಭೌತಿಕ ಶರೀರವಿದ್ದಾಗಲೇ ದೈವಸಾಕ್ಷಾತ್ಕಾರವಾಗಿತ್ತು. ಅವನು ಅಮೆರಿಕಾದಲ್ಲಿದ್ದಾಗ, ಗುರುಮಹಾರಾಜರಿಗಾಗಿ ಅವನ ಹೃದಯದಲ್ಲಿ ತೀವ್ರ ವ್ಯಾಕುಲತೆ ಉಂಟಾಯಿತು. ಆಗ ಅವನಿಗೆ ಅವರ ದರ್ಶನವಾಯಿತು" ಎಂದು. ಶ್ರೀಮಾತೆ ಮತ್ತೂ ಹೇಳುತ್ತಾರೆ, "ನರೇಂದ್ರನೊಬ್ಬನಿಂದಲೇ ಇಷ್ಟೆಲ್ಲಾ ಸಾಧಿಸಲು ಸಾಧ್ಯವಾಗುತ್ತಿರಲಿಲ್ಲ. ಗುರುಮಹಾರಾಜರು ಮೊದಲೇ ತಾವು ಏನನ್ನು ಸಾಧಿಸಬೇಕೆಂದು ನಿರ್ಧರಿಸಿದ್ದರು. ಅವರು ಅವನ ಮೂಲಕ ಕೆಲಸ ಮಾಡಿಸಿದುದರಿಂದಲೇ, ಅವನಿಗೆ ಇಷ್ಟು ಸಾಧಿಸಲು ಸಾಧ್ಯವಾಯಿತು."

ಹೀಗೆ ಭಗವಂತನ ಕಾರ್ಯಕ್ಕಾಗಿ ದೇವರ ಸಂಕಲ್ಪದಿಂದಲೇ, ದೇವರೊಡನೆಯೇ ಸಪ್ತರ್ಷಿಮಂಡಲದಿಂದ ಭುವಿಗೆ ಇಳಿದು ಬಂದ ಋಷಿಶ್ರೇಷ್ಠ ಸ್ವಾಮಿ ವಿವೇಕಾನಂದರು, ಶ್ರೀಮಾತೆಯವರ ಪಾಲಿಗೆ ಸುಪುತ್ರನಾಗಿ ದೇವಕಾರ್ಯನಿರ್ವಾಹಕ ಯಂತ್ರವಾಗಿ, ಲೋಕಗುರುವಾಗಿ, ಯೋಗಿಯಾಗಿ, ಮಾರ್ಗದರ್ಶಕನಾಗಿ ಅನೇಕ ಭಾವಗಳಲ್ಲಿ ಕಂಡಿದ್ದಾರೆ.

## ಮಾಯೆಯ ಬಲೆ

ಒಂದು ಹಂತದಲ್ಲಿ ನರೇಂದ್ರನಿಗೆ ಎಂತಹ ವೈರಾಗ್ಯಭಾವ ಆವರಿಸಿತ್ತೆಂದರೆ, ಪ್ರಕೃತಿಯೊಡನೆ ಹೋರಾಡಿ ಆತ್ಮಶಕ್ತಿಯನ್ನು ಸ್ಥಾಪಿಸುವ ಅದಮ್ಯ ಛಲವಿತ್ತು. ಮಾಯಾಪ್ರಪಂಚವನ್ನು ಪುಡಿ ಪುಡಿ ಮಾಡಿ ಆತ್ಮಶಕ್ತಿಯನ್ನು ಸ್ಥಾಪಿಸುವ ಹಂಬಲ, ತುಡಿತಗಳನ್ನು ಹೊಂದಿದ್ದ ನರೇಂದ್ರ ಒಮ್ಮೆ ಗಿರೀಶಚಂದ್ರ ಘೋಷನಿಗೆ ಹೀಗೆಂದು ಹೇಳುತ್ತಾನೆ: " ಮಾಯೆಯು ನನ್ನ ಮೇಲೆ ಗೆಲವು ಸಾಧಿಸಲು ಪ್ರಯತ್ನಿಸುತ್ತಿದೆ. ನಾನು ಮಾಯೆಯನ್ನು ಗೆಲ್ಲಲು ಪ್ರಯತ್ನಿಸುತ್ತಿರುವೆ. 'ಮಾಯೆ' ಅಥವಾ 'ನಾನು' – ಇವರಲ್ಲಿ ಒಬ್ಬರು ಮಡಿಯಲೇಬೇಕು. ಇಬ್ಬರೂ ಒಟ್ಟಿಗಿರಲು ಸಾಧ್ಯವೇ ಇಲ್ಲ!"

ಮುಂದೊಂದು ದಿನ ಗಿರೀಶಚಂದ್ರ ಘೋಷ್ ಈ ಘಟನೆಯನ್ನು ನೆನೆಯುತ್ತ ಹೇಳುತ್ತಾನೆ: "ನರೇಂದ್ರನದು ಎಂಥ ಉನ್ನತ ಚಿಂತನೆ! ಎಂತಹ ದೃಢ ನಿರ್ಧಾರ! ಇಂತಹ ವಿಚಾರಗಳನ್ನು ನಾನು ಕೇಳಿಯೇ ಇರಲಿಲ್ಲ. ಮಾಯೆಯನ್ನು ತುಳಿದು ಆತ್ಮಶಕ್ತಿಯನ್ನು ಪ್ರತಿಷ್ಠಾಪಿಸುವ ಆಸೆ ನರೇಂದ್ರನಿಗೆ. ಇದೊಂದು ನವೀನ ಭಾವನೆ! ಇಂತಹ ಮಾತುಗಳನ್ನು ಕೇವಲ ನರೇಂದ್ರನಿಗೆ ಮಾತ್ರ ಹೇಳಲು ಸಾಧ್ಯ. ಅವನು ಅಂತಹ ದೃಢ ಮನಸ್ಸಿನವನು! ಎಲ್ಲರಿಗೂ ಇಂತಹ ಕ್ರಾಂತಿಕಾರಿ ಭಾವನೆಗಳು ಹಿಡಿಸುತ್ತಿರಲಿಲ್ಲ. ಆದ್ದರಿಂದ ಅವರು ಅವನನ್ನು ಖಂಡಿಸುತ್ತಿದ್ದರು."

ಒಮ್ಮೆ ನರೇಂದ್ರ ಗಿರೀಶನ ಬಳಿ ಖೇದದಿಂದ ಹೀಗೆ ಹೇಳಿದ: "ನಾನು ದಕ್ಷಿಣೇಶ್ವರದ ಆ ಹುಚ್ಚು ಬ್ರಾಹ್ಮಣನ ಹೊರತಾಗಿ ಎಲ್ಲವನ್ನೂ ಮರೆಯಬಲ್ಲೆ; ಈ ದೇಹವನ್ನೂ ಸಹ. ಅವರು ನನ್ನ ಆಧ್ಯಾತ್ಮಿಕ ಜೀವನದ ವಿಘ್ನವಾಗಿದ್ದಾರೆ ಎನಿಸುತ್ತದೆ. ನಾಮರೂಪಗಳಿಗೆ ಅತೀತನಾದ ಆ ಬ್ರಹ್ಮವಸ್ತುವನ್ನು ಪಡೆಯಲು ಇವರನ್ನು ನಾನು ಮರೆಯಲೇಬೇಕು." ಶ್ರೀರಾಮಕೃಷ್ಣರ ಶ್ರೇಷ್ಠಭಕ್ತನಾದ ಗಿರೀಶನು ಈ ಮಾತುಗಳನ್ನು ಕೇಳಿ ಸ್ತಂಭೀಭೂತನಾದ.

ಮತ್ತೊಂದು ಸಂದರ್ಭದಲ್ಲಿ ಗಿರೀಶಚಂದ್ರ ಘೋಷನು ಹೀಗೆಂದು ಉದ್ಗರಿಸಿದನು: " ನರೇಂದ್ರ ಏನು ಹೇಳುತ್ತಿರುವನು? ತನ್ನ ಗುರುವನ್ನು ತ್ಯಾಗ ಮಾಡುವನಂತೆ! ಆಹಾ ! ನರೇಂದ್ರ ಎಂತಹ ಉನ್ನತ ಭಾವದಲ್ಲಿರುವನು ಎಂಬುದನ್ನು ನನಗೆ ಊಹಿಸಲೂ ಸಾಧ್ಯವಿಲ್ಲ. ಇಂತಹ ಭಾವ ಕೇವಲ ನರೇಂದ್ರನಿಗೆ ಮಾತ್ರ ಸಾಧ್ಯ!"

## ಧ್ಯಾನಸಿದ್ಧ

ಒಮ್ಮೆ ಸ್ವಾಮಿ ತುರೀಯಾನಂದರು ಸಭ್ಯವ್ಯಕ್ತಿಯೊಬ್ಬರಿಗೆ ಸ್ವಾಮಿ ವಿವೇಕಾನಂದರ ಬಗ್ಗೆ ಹೀಗೆಂದು ಹೇಳುತ್ತಾರೆ: " ಸ್ವಾಮೀಜಿ ಸಾತ್ವಿಕ ವ್ಯಕ್ತಿಯಾಗಿದ್ದರು. ಇಲ್ಲದಿದ್ದರೆ ಅಷ್ಟೊಂದು ಶ್ರೇಷ್ಠಗುಣಗಳನ್ನು ಹೊಂದಲು ಅವರಿಗೆ ಹೇಗೆ ತಾನೇ ಸಾಧ್ಯವಾಗುತ್ತಿತ್ತು? ಇದು ನಾನು ಎಲ್ಲಿಯೋ ಕೇಳಿತಿಳಿದ ಮಾತಲ್ಲ. ನಾನು ಅವರೊಡನೆ ಇದ್ದಾಗ ಕಣ್ಣಾರೆ ಕಂಡ ಸತ್ಯವಿದು. ಅವರು ಪ್ರತಿದಿನ ರಾತ್ರಿ ಒಂಬತ್ತು ಗಂಟೆಗೆ ಧ್ಯಾನಕ್ಕೆ ಕುಳಿತರೆ, ಬೆಳಗಿನ ಜಾವ ಐದು ಗಂಟೆಗೇ ಏಳುತ್ತಿದ್ದರು. ಅನಂತರ ಸ್ನಾನ ಮಾಡುತ್ತಿದ್ದರು. ಧ್ಯಾನಕ್ಕೆ ಕುಳಿತಾಗ ಒಂದು ಕಂಬಳಿಯನ್ನು ಹೊದ್ದುಕೊಂಡಂತೆ, ಅವರ ಶರೀರದ ಮೇಲೆಲ್ಲಾ ಸೊಳ್ಳೆಗಳು ಕುಳಿತಿರುತ್ತಿದ್ದವು. ಧ್ಯಾನ ಮಾಡುತ್ತಿರುವಾಗ ಸ್ವಾಮೀಜಿ ಸಾಕ್ಷಾತ್ ಶಿವನಂತೆ ಕಂಗೊಳಿಸುತ್ತಿದ್ದರು. ಮನಸ್ಸು ಇಂದ್ರಿಯಗಳ ಸಂಪೂರ್ಣನಿಗ್ರಹ ಮತ್ತು ಮನಸ್ಸಿನ ಪ್ರಶಾಂತತೆ – ಇವು ಸಾತ್ವಿಕರ ಗುಣಲಕ್ಷಣಗಳು."

(ಸಂಗ್ರಹ : **ಕುಮಾರಿ ಸ್ವರ್ಣಗೌರಿ**)

# ಸೋದರಿ ನಿವೇದಿತಾಗೆ ವಿವೇಕಾನಂದರ ಸ್ಫೂರ್ತಿ



**ಪಾರ್ವತಮ್ಮ ಚಂದ್ರಣ್ಣ**


**ಸಾ**ಮಾನ್ಯವಾಗಿ ಮಹಿಳೆ ಅಬಲೆ, ಮೃದುವಾದ ನಡೆನುಡಿಯುಳ್ಳವಳು ಎಂಬ ಮಾತು ಸಹಜವೆ. ಆದರೆ ಆಕೆ ತನ್ನ ಅಂತಶ್ಶಕ್ತಿ ಬೆಳೆಸಿಕೊಂಡು ದೃಢತೆಯಿಂದ ಮುಂದುವರಿದರೆ ಏನನ್ನಾದರೂ ಸಾಧಿಸಬಲ್ಲಳು. **'ವಜ್ರಾದಪಿ ಕಠೋರಾನಿ, ಮೃದೂನಿ ಕುಸುಮಾದಪಿ'** ಎಂಬಂತೆ, ಮೌಢ್ಯ, ದಾಸ್ಯ, ದಬ್ಬಾಳಿಕೆಗಳ ವಿರುದ್ಧವಾಗಿ ಕಠೋರವಾಗಿ ವರ್ತಿಸುತ್ತಿದ್ದ ಸೋದರಿ ನಿವೇದಿತಾ ಅನಕ್ಷರಸ್ಥ ಮುಗ್ಧಭಾವದ ಸ್ತ್ರೀಯರನ್ನು, ದೀನದರಿದ್ರರನ್ನು ಕಂಡು ಅತಿ ಕೋಮಲವಾಗಿ ವರ್ತಿಸಿ ಅವರ ಸೇವೆ ಮಾಡುವ ಕಾರ್ಯ ಕೈಗೊಂಡಿದ್ದಳು. ಈಕೆಯ ಈ ಕಾರ್ಯಗಳಲ್ಲಿ ಸ್ವಾಮಿ ವಿವೇಕಾನಂದರಿಂದ ಎಲ್ಲ ಬಗೆಯ ಸ್ಫೂರ್ತಿ, ಪ್ರೋತ್ಸಾಹ ದೊರಕುತ್ತಿತ್ತು.

ಐರ್ಲೆಂಡ್ ದೇಶದ ಮಗಳಾಗಿ ಜನಿಸಿದ್ದ ಮಾರ್ಗರೆಟ್ ನೊಬೆಲ್ ಬೆಳೆದ ವಾತಾವರಣ ಆಧ್ಯಾತ್ಮಿಕತೆಯಿಂದ ಕೂಡಿತ್ತು. ಅವಳ ಅಜ್ಜಿ ಸದಾ ಭಗವದ್ವಾಣಿಗಳನ್ನು, ಬೈಬಲ್‌ನ ಅನೇಕ ವಿಚಾರಗಳನ್ನೂ ಕತೆಗಳನ್ನೂ ಹೇಳುತ್ತಿದ್ದರು. ಅದರಿಂದ ಅವಳಲ್ಲಿದ್ದ ಆಧ್ಯಾತ್ಮಿಕ ಭಾವ ಮತ್ತಷ್ಟು ಬಲಿಯಿತು. ದೇವರು – ದೇಶ ಎರಡರ ಸೇವೆಗೂ ಆಕೆಯ ತಂದೆ, ತನ್ನನ್ನು ತಾನು ಅರ್ಪಿಸಿಕೊಂಡಿದ್ದ. ಅಜ್ಜ ಹ್ಯಾಮಿಲ್ಟನ್ ಪ್ರಖರ ರಾಷ್ಟ್ರಪ್ರೇಮಿ. ಹೀಗಾಗಿ ನೊಬೆಲ್ಲಳಲ್ಲಿ ದೈವಭಕ್ತಿ ಮತ್ತು ರಾಷ್ಟ್ರಭಕ್ತಿ ಎರಡೂ ಬೆಳೆದು ಬರಲು ಸಹಾಯಕವಾಯಿತು. ಬಾಲ್ಯದಿಂದಲೇ ಇಂತಹ ಭಾವನೆಗಳನ್ನು ಮನಸ್ಸಿನಲ್ಲಿ ಬೇರೂರಿಸಿಕೊಂಡ ಮಾರ್ಗರೆಟ್‌ಳಿಗೆ ಲಂಡನ್‌ನಲ್ಲಿ ಮೊತ್ತಮೊದಲು ಸ್ವಾಮಿ ವಿವೇಕಾನಂದರ ದರ್ಶನವಾಯಿತು; ಅವರ ದಿವ್ಯ ಗಂಭೀರವಾಣಿಯನ್ನು ಆಲಿಸುವ ಸದವಕಾಶ ದೊರೆಯಿತು. ಅವರ ಉಜ್ವಲ ಮಾತುಗಳು ಆಕೆಯ ಹೃದಯವನ್ನು ಬೆಳಗಿದವು, ಬುದ್ಧಿಯನ್ನು ಮಥಿಸಿದವು. ಸತ್ಯದ ಹೊನಲಿನಂತೆ ಹರಿದ ಅವರ ಮಾತುಗಳಿಂದ ಮಂತ್ರಮುಗ್ಧಳಾದ ಆಕೆ, ಅವರನ್ನೇ ತನ್ನ 'ಗುರುದೇವ' ಎಂದು ಗುರುತಿಸಿಕೊಂಡಳು. ಸ್ವತಂತ್ರ ಮನೋಭಾವದ ಆ ಧೀರ ತರುಣಿ ತನ್ನನ್ನು ತಾನು ಗುರುಗಳ ಪಾದದಲ್ಲಿ ಸಮರ್ಪಿಸಿಕೊಂಡು, ಸಮಾಜಸೇವೆಗಾಗಿ ಭಾರತಕ್ಕೆ ಬರುವ ತನ್ನ ಮನದಾಳದ ಹಂಬಲ ವ್ಯಕ್ತಪಡಿಸಿದಳು. ಸ್ವಾಮೀಜಿಯಂತಹ ಶ್ರೇಷ್ಠ ಗುರುವಿನ ಮಾರ್ಗದರ್ಶನದಲ್ಲಿ ಸೇವೆ ಮಾಡುವ ಸದವಕಾಶ ದೊರೆತರೆ ಅದೇ ತನ್ನ ಭಾಗ್ಯ ಎಂದು ಭಾವಿಸಿದಳು.

ಸ್ವಾಮೀಜಿ ಇಂಗ್ಲೆಂಡಿನಿಂದ ಭಾರತಕ್ಕೆ ತೆರಳಿದ ಮೇಲೆ ಮಾರ್ಗರೆಟ್ ನೊಬೆಲ್‌ಳಿಗೆ ಪತ್ರ ಬರೆಯುತ್ತಾರೆ: "ಈ ಜಗತ್ತು ಮೂಢನಂಬಿಕೆಗಳ ಸರಪಳಿಯಲ್ಲಿ ಸಿಕ್ಕಿಕೊಂಡಿದೆ. ದಲಿತರನ್ನು ನಾನು ಕನಿಕರಿಸುತ್ತೇನೆ. ಹಾಗೆಯೇ ಅವರನ್ನು ಅಜ್ಞಾನ ಅಹಂಕಾರಗಳಿಂದ ತುಳಿಯುವವರ ಬಗೆಗೂ, ಅವರು ಸ್ತ್ರೀಯರಾಗಲಿ, ಪುರುಷರಾಗಲಿ, ನನಗೆ ಅದಕ್ಕಿಂತಲೂ ಹೆಚ್ಚು ಕನಿಕರವಿದೆ. ಒಂದು ಭಾವನೆ ಹಗಲಿನ ಬೆಳಕಿನಂತೆ ನನಗೆ ಸ್ಪಷ್ಟವಾಗಿದೆ; ಅದೆಂದರೆ, ದುಃಖಕ್ಕೆ ಕಾರಣ ಅಜ್ಞಾನವೇ ಹೊರತು ಬೇರೆ ಏನೂ ಅಲ್ಲ ಎಂಬುದು. ಕೇವಲ ತ್ಯಾಗ ಈ ಜಗತ್ತಿಗೆ ಬೆಳಕನ್ನು ಕೊಡಬಲ್ಲದು. ಜಗತ್ತಿನ ಅತ್ಯಂತ ಧೀರರೂ, ಮಹಾತ್ಮರೂ ಬಹುಜನರ ಹಿತಕ್ಕಾಗಿ ತಮ್ಮನ್ನು ತಾವು ಬಲಿಕೊಟ್ಟುಕೊಳ್ಳಲೇಬೇಕು. ಶಾಶ್ವತ ಪ್ರೇಮ ಮತ್ತು ಕರುಣೆಗಳಿಗಾಗಿ ನಮಗೆ ನೂರಾರು ಜನ ಬುದ್ಧರು ಬೇಕಾಗಿದ್ದಾರೆ.

"ನನಗೆ ಗೊತ್ತು, ನಿನ್ನಲ್ಲಿ ಯಾವ ಮೂಢನಂಬಿಕೆಯೂ ಇಲ್ಲ, ಜಗತ್ತನ್ನೇ ಚಲಿಸಬಲ್ಲ ಶಕ್ತಿ ನಿನ್ನಲ್ಲಿದೆ. ನಮಗೆ ಬೇಕಾಗಿರುವುದು ನಿರ್ಭಯವಾದ ಮಾತು, ನಿರ್ಭಯವಾದ ಕೃತಿ. ಜಗತ್ತು ದುಃಖದಲ್ಲಿ ಬೇಯುತ್ತಿದೆ. ನೀನು ಮಾತ್ರ ನಿದ್ರಿಸಬಲ್ಲೆಯೇನು? ನಿದ್ರಿಸುತ್ತಿರುವ ದೇವತೆಗಳು ಎದ್ದೇಳುವವರೆಗೂ, ನಮ್ಮಲ್ಲಿರುವ ದೇವರು ಪ್ರತ್ಯುತ್ತರ ಕೊಡುವವರೆಗೂ, ಕರೆಯುತ್ತಲೇ ಹೋಗೋಣ."

**ಸ್ವಾಮಿ ವಿವೇಕಾನಂದರು ಪಾಶ್ಚಾತ್ಯ ದೇಶಗಳಿಂದ ಕರೆತಂದು ಭಾರತಕ್ಕೆ ಇತ್ತ ಅಮೂಲ್ಯ ಕೊಡುಗೆಯೇ ಸೋದರಿ ನಿವೇದಿತಾ. ಪವಿತ್ರತೆ, ಮಧುರತೆಯ ಜೊತೆಜೊತೆಗೆ ಕರ್ಮಕಠೋರತೆ ಮತ್ತು ವಿದ್ವತ್ಪ್ರತಿಭೆಗಳನ್ನು ಮೇಳವಿಸಿಕೊಂಡು, ತನ್ನ ಕಡೆಯ ರಕ್ತದ ಹನಿಯನ್ನು ಕೂಡ ಭರತಮಾತೆಯ ಸೇವೆಗೆ ಸಮರ್ಪಿಸಿದ ಮಹಾಭಾಗ್ಯವಂತೆ ಆಕೆ. ಸ್ವಾಮಿ ವಿವೇಕಾನಂದರಿಂದ ನಿವೇದಿತಾ ಪಡೆದ ಪ್ರೇರಣೆ, ಸ್ಫೂರ್ತಿಗಳ ಉದಾತ್ತ ಕಥನವನ್ನು ಇಲ್ಲಿ ಕಾಣುತ್ತೇವೆ. ಶ್ರೀಮತಿ ಪಾರ್ವತಿ ಚಂದ್ರಣ್ಣ ಅವರು ವಚನಸಾಹಿತ್ಯದಲ್ಲಿ ಅಪಾರ ಪರಿಶ್ರಮ ಉಳ್ಳವರು. ಇದರ ಬಗ್ಗೆ ಹಲವು ಪುಸ್ತಕಗಳನ್ನು ರಚಿಸಿರುವ ಇವರ ಹಲವು ಲೇಖನಗಳು 'ವಿವೇಕಪ್ರಭ' ದಲ್ಲಿ ಈಗಾಗಲೇ ಪ್ರಕಟವಾಗಿವೆ.**



ಸ್ವಾಮೀಜಿಯವರ ಈ ಮಾತುಗಳಿಂದ ಪುಳಕಗೊಂಡ ನೊಬೆಲ್‌ಳಿಗೆ ಭಾರತವನ್ನು ಒಳಹೊಕ್ಕು ನೋಡುವ ಆತುರ ಹೆಚ್ಚಾಯಿತು.

ಇನ್ನೊಂದು ದಿನ ಸ್ವಾಮೀಜಿ, "ನನ್ನ ದೇಶದ ಸ್ತ್ರೀಯರಿಗೆ ವಿದ್ಯಾಭ್ಯಾಸ ಕೊಡುವ ಅಗತ್ಯ ತುಂಬ ಇದೆ. ಅದಕ್ಕೆ ತಕ್ಕ ಯೋಜನೆಗಳನ್ನು ಹಾಕುತ್ತಿದ್ದೇನೆ. ನಿನ್ನಿಂದ ನನಗೆ ತುಂಬ ಸಹಾಯವಾದೀತು. ಸಹಸ್ರಾರು ಭಾರತೀಯ ಮಹಿಳೆಯರು ಕಾಯುತ್ತಿದ್ದಾರೆ. ಪಾಶ್ಚಾತ್ಯ ಮಹಿಳೆಯೊಬ್ಬಳು ತಮ್ಮ ನಡುವೆ ನಿಂತು ಹೋರಾಡಲು ದಾರಿ ತೋರಲು ಮುಂದೆ ಬಂದರೆ ಅವರು ತಲೆಯೆತ್ತಿ ನೋಡುತ್ತಾರೆ" ಎಂದು ಬರೆದರು. ಈ ಕರೆಗೆ ಮಾರ್ಗರೆಟ್ ಭಾರತಕ್ಕೆ ಬಂದು, ಇಲ್ಲಿಯ ಸ್ತ್ರೀಯರ ಅನಕ್ಷರತೆ, ಅಜ್ಞಾನಗಳನ್ನು ತೊಡೆದು ಅವರ ಸರ್ವಾಂಗೀಣ ಉದ್ಧಾರಕ್ಕೆ ಕಂಕಣ ತೊಡಬೇಕೆಂಬ ನಿರ್ಧಾರವನ್ನು ಮನದಾಳದಿಂದ ಕೈಗೊಂಡಳು.

ಸ್ವಾಮೀಜಿ ಮುಂದುವರಿದು ಹೀಗೆ ಬರೆದರು: "ಇಲ್ಲಿ ಕಷ್ಟಗಳೂ ಬೇಕಾದಷ್ಟಿವೆ. ಇಲ್ಲಿನ ಸಂಕಟ, ಮೂಢನಂಬಿಕೆ, ದಾಸ್ಯಮನೋಭಾವ – ಇವುಗಳನ್ನು ನೀನು ಕಲ್ಪಿಸಿಕೊಳ್ಳುವುದು ಕೂಡ ಸಾಧ್ಯವಿಲ್ಲ. ನಾನು ಸ್ಪಷ್ಟವಾಗಿ ಹೇಳುತ್ತೇನೆ, ಈಗ ನನಗೆ ಖಚಿತವಾಗಿ ಗೊತ್ತಾಗಿದೆ, ಭಾರತಕ್ಕೆ ಸೇವೆ ಸಲ್ಲಿಸುವ ವಿಷಯದಲ್ಲಿ ನಿನಗೆ ಉಜ್ವಲವಾದ ಭವಿಷ್ಯವಿದೆ. ನಿನ್ನ ವಿದ್ಯೆ, ಪ್ರಾಮಾಣಿಕತೆ, ಪರಿಶುದ್ಧತೆ, ಅನಂತಪ್ರೇಮ, ನಿರ್ಧಾರ ಮನೋಭಾವ – ಇವು ನಮಗೀಗ ಬೇಕಾಗಿರುವ ಮಹಿಳೆ ನೀನೇ ಎಂಬುದನ್ನು ತೀರ್ಮಾನಿಸಿವೆ. ಇಲ್ಲಿ ಪಾಶ್ಚಾತ್ಯ ಸೌಲಭ್ಯಗಳು ಒಂದೂ ಇಲ್ಲ. ಇವೆಲ್ಲವನ್ನೂ ಸಹಿಸಿಯೂ ನಾನಿಲ್ಲಿ ಇರುತ್ತೇನೆ ಎಂದು ನೀನು ಧೈರ್ಯ ಮಾಡಿದರೆ ನಿನಗೆ ಸ್ವಾಗತ, ನೂರು ಸಲ ಸ್ವಾಗತ." ಭಾರತೀಯ ಮಹಿಳೆಯರ ಸೇವೆಗಾಗಿ ದೃಢ ನಿರ್ಧಾರ ಕೈಗೊಳ್ಳುವಂತೆ ನೊಬೆಲ್‌ಳಿಗೆ ಸ್ವಾಮೀಜಿ ಹೀಗೆ ಧೈರ್ಯ ತುಂಬಿದರು.

ಸ್ವಾಮೀಜಿ ನೊಬೆಲ್‌ಳನ್ನು ಹುರಿದುಂಬಿಸಿದ್ದು ಹೀಗೆ: "ಭಾರತದ ಸಮಾಜಸೇವೆಯಲ್ಲಿ ಧುಮುಕುವ ಮುನ್ನ ನೀನು ಚೆನ್ನಾಗಿ ಯೋಚಿಸಬೇಕು. ಇಲ್ಲಿಗೆ ಬಂದ ಮೇಲೆ ಕಾರ್ಯರಂಗದಲ್ಲಿ ನೀನು ಸೋಲು ಕಂಡರೆ ಅಥವಾ ಬೇಸರಪಟ್ಟುಕೊಂಡರೆ ನಾನು ಭರವಸೆ ಕೊಡುತ್ತೇನೆ, ನೀನು ಭಾರತಕ್ಕಾಗಿ ಎಷ್ಟಾದರೂ ಕೆಲಸ ಮಾಡು, ಇಲ್ಲಿಯ ವೇದಾಂತವನ್ನು ನಂಬು ಅಥವಾ ಬಿಡು, ನಾನು ಸಾಯುವವರೆಗೂ ನಿನಗೆ ಬೆಂಬಲ ನೀಡುತ್ತೇನೆ. ಇದು ನನ್ನ ವಾಗ್ದಾನ. ನಾನು ನಿನಗೊಂದು ಎಚ್ಚರಿಕೆಯನ್ನು ಕೊಡಬೇಕಾಗಿದೆ. ನಿನ್ನ ಕಾಲ ಮೇಲೆ ನೀನು ನಿಲ್ಲಬೇಕು, ಯಾರ ಹಂಗಿನ ನೆರಳಲ್ಲೂ ಅಲ್ಲ. ನಿನ್ನ ಸ್ವಂತ ಜೀವನದ ಜವಾಬ್ದಾರಿಯನ್ನು ನೀನು ನಿರ್ವಹಿಸ ಬೇಕೇ ಹೊರತು ಅದಕ್ಕಾಗಿ ಬೇರೊಬ್ಬರನ್ನು ಅವಲಂಬಿಸು ವಂತಿಲ್ಲ." ಬೇರೊಂದು ಪತ್ರದಲ್ಲಿ, "ನಾನು ಸಾಯುವವರೆಗೂ ನಿನಗೆ ಬೆಂಬಲವಾಗಿ ನಿಲ್ಲುತ್ತೇನೆ. ಆನೆಯ ದಂತಗಳು ಹೊರಕ್ಕೆ ಚಾಚುತ್ತವೆಯೇ ಹೊರತು ಹಿಂದಕ್ಕೆ ಹೋಗುವುದಿಲ್ಲ. ಹಾಗೆಯೇ ಮನುಷ್ಯನ ಮಾತುಗಳೂ ಕೂಡ" ಎಂದು ಸ್ವಾಮೀಜಿಯು ಬರೆದಿದ್ದ ಭರವಸೆಯ ಮಾತುಗಳು ಆಕೆಯ ಮನದಾಳದಲ್ಲಿ ಅಚ್ಚೊತ್ತಿದಂತೆ ಉಳಿದವು. ಮಾರ್ಗರೆಟ್ ನೊಬೆಲ್ ತನ್ನ ನಾಡನ್ನು ತ್ಯಜಿಸಿ ಭಾರತವನ್ನು ತಲುಪಲು ಹಡಗನ್ನೇರಿದಳು.

ಮಾರ್ಗರೆಟ್‌ಳ ಜೀವನದ ಮಹಾದಿನ ೧೮೯೮, ಮಾರ್ಚ್ ೨೫ ನೆಯ ಶುಕ್ರವಾರದಂದು. ಅಂದು ಸ್ವಾಮೀಜಿ ಆಕೆಯನ್ನು ತಮ್ಮ ಆರಾಧ್ಯದೈವದ ಪಾದಪದ್ಮಗಳಲ್ಲಿ ಮತ್ತು ಭಾರತದ ಸೇವೆ ಗೆಂದು ಸಮರ್ಪಿಸಿದರು. ಅಂದೇ ಆಕೆಯನ್ನು ಮಠಕ್ಕೆ ಕರೆದೊಯ್ದು ಅಲ್ಲಿ ದೇವರಮನೆಯೊಳಕ್ಕೆ ಕರೆದು ಕೂಡಿಸಿದರು; ಶಿವನನ್ನು ಪೂಜಿಸುವ ವಿಧಾನವನ್ನು ಆಕೆಗೆ ಹೇಳಿಕೊಟ್ಟರು. ನಂತರ ಆಕೆಗೆ ಬ್ರಹ್ಮಚರ್ಯ ದೀಕ್ಷೆ ನೀಡಿ ಅಲ್ಲಿಯೇ 'ನಿವೇದಿತಾ' ಎಂಬ ಹೆಸರನ್ನು ಕೊಟ್ಟರು. ಆಗ ಆಕೆಯ ವಯಸ್ಸು ಕೇವಲ ೩೧. ನಂತರ ಬುದ್ಧನ ವಿಗ್ರಹಕ್ಕೆ ಪುಷ್ಪ ಸಮರ್ಪಣೆ ಮಾಡುವಂತೆ ತಿಳಿಸಿ, ತಾವು ನಡೆದ ಹಾದಿಯಲ್ಲಿ ನಡೆಯುವಂತೆ ಆಕೆಗೆ ಬೋಧಿಸಿದರು. ತಾವು ಸ್ವಯಂ 'ಶಿವ' ಎಂದು ಹೇಳಿಕೊಳ್ಳುತ್ತಿದ್ದ ಸ್ವಾಮೀಜಿ, ಶಿವನ ವೇಷ ಧರಿಸಿ ವಾದ್ಯ ನುಡಿಸುತ್ತಾ ಭಾವುಕತೆಯಿಂದ ಗಂಟೆಗಟ್ಟಲೆ ಹಾಡಿದರು. ನೈಷ್ಠಿಕ ಬ್ರಹ್ಮಚಾರಿಣಿಯಾದ ನಿವೇದಿತಾ ತನ್ನ ಗುರುಗಳ ನಿಲುವನ್ನು ಹೆಚ್ಚು ಹೆಚ್ಚು ಮೂಕವಿಸ್ಮಿತಳಾಗಿ ಅನುಭವಿಸಿದಳು.

ನಮ್ಮ ಜೀವನ ಕೇವಲ ನಮ್ಮ ಕರ್ಮಗಳನ್ನು ಸವೆಸುವುದಕ್ಕಾಗಿ ಅಲ್ಲ; ನಾವು ಮಾಡುವ ನಿಷ್ಕಾಮ ಕರ್ಮಗಳು ನಮ್ಮ ಅಂತರಂಗದ ಸಾಧನೆಗಾಗಿ ಎಂಬ ಜಾಗೃತಿ ಸದಾ ಇರಬೇಕೆಂಬ ಗುರುದೇವನ ವಾಣಿಯನ್ನು ಅವಳು ಮರೆಯಲು ಸಾಧ್ಯವೇ ಇರಲಿಲ್ಲ.

ಇಂಗ್ಲೆಂಡ್ ದೇಶದಲ್ಲಿ ಶಿಕ್ಷಕಿಯಾಗಿದ್ದ ನಿವೇದಿತಾ ಇಲ್ಲಿಯೂ ಶಿಕ್ಷಕಿಯಾಗಿ ಕೆಲಸ ನಿರ್ವಹಿಸುತ್ತ, ಆಶ್ರಮವಾಸಿಗಳಿಗೆ ಶರೀರಶಾಸ್ತ್ರ ಮತ್ತು ಸಸ್ಯಶಾಸ್ತ್ರಗಳನ್ನು ವೈಜ್ಞಾನಿಕವಾಗಿ ಬೋಧಿಸತೊಡಗಿದಳು. ಮಹಿಳೆ ತನ್ನ ಜಾಣತನ, ತಾಳ್ಮೆ ಹಾಗೂ ಸೇವಾಮನೋಭಾವದ ಜೊತೆಗೆ ಆಧ್ಯಾತ್ಮಿಕವಾಗಿಯೂ ಪ್ರಗತಿ ಸಾಧಿಸಬಲ್ಲಳು ಎಂಬ ಸಂದೇಶವನ್ನು ಆಕೆಯ ಜೀವನದಲ್ಲಿ ಪ್ರತ್ಯಕ್ಷ ಕಾಣುತ್ತೇವೆ. "ಎಷ್ಟೇ ಕೆಲಸಕಾರ್ಯಗಳಿದ್ದರೂ ಧ್ಯಾನ ಪ್ರಾರ್ಥನೆಗಳಿಗೆ ಸಮಯವಿಲ್ಲ ಎಂದು ಮಾತ್ರ ಹೇಳಬೇಡ. ಅದು ಅವಿರತವಾಗಿ ಸಾಗಬೇಕು" ಎಂಬ ಮಾತನ್ನು ಸ್ವಾಮೀಜಿ ಒತ್ತಿ ಒತ್ತಿ ಹೇಳಿದ್ದರು. ೧೨ನೆಯ ಶತಮಾನದ ಶರಣೆಯರು ತಮ್ಮ ತಮ್ಮ ಕಾಯಕವನ್ನು ನಿರ್ವಹಿಸು ತ್ತಲೇ, ಸಂಸಾರದ ನಡುವೆ ಇದ್ದರೂ ತಮ್ಮ ಜೀವನದ ಮುಕ್ತಿಯನ್ನು ಪಡೆಯಲಿಲ್ಲವೇ? ಗೋಪಿಕಾಸ್ತ್ರೀಯರು ಕೃಷ್ಣನ ಕೊಳಲದನಿಗೆ ಮಾರುಹೋಗಿ ತಮ್ಮ ಕೆಲಸಕಾರ್ಯಗಳ ಮಧ್ಯೆಯೇ ಶ್ರೀಕೃಷ್ಣನಿಗೆ ತಮ್ಮನ್ನು ಸಮರ್ಪಿಸಿಕೊಂಡರು. ಭಕ್ತೆ ಮೀರಾ ಸಂಸಾರದಲ್ಲಿದ್ದರೂ ಆಕೆಯ ಸರ್ವಸ್ವವೂ ಕೃಷ್ಣಪರಮಾತ್ಮನೇ ಆಗಿದ್ದ. ಅಷ್ಟೇ ಏಕೆ, ಶ್ರೀಮಾತೆಯವರು ರಾಮಕೃಷ್ಣ ಪರಮಹಂಸರನ್ನು ನೋಡಲು ಬರುವ ಭಕ್ತರಿಗೆ, ಅತಿಥಿಗಳಿಗೆ ಊಟೋಪಚಾರಗಳನ್ನು ಪೂರೈಸು ವುದರಲ್ಲಿಯೇ ಮುಳುಗಿದ್ದರೂ, ಒಂದು ಬಾರಿಯೂ ಅಸಮಾಧಾನ ದಿಂದ ಗೊಣಗದೆ, 'ಬಂದವರೆಲ್ಲ ನನ್ನ ಮಕ್ಕಳು' ಎಂಬಂತೆ ಎಲ್ಲರಿಗೂ ಅಡುಗೆ ಮಾಡಿ ಬಡಿಸುತ್ತಿದ್ದರು, ಆದರೆ ಮನಸ್ಸಿನಲ್ಲಿ ಮಾತ್ರ ಶ್ರೀರಾಮಕೃಷ್ಣರನ್ನು ತುಂಬಿಕೊಂಡಿದ್ದರು. ಆದರೆ ಇಂದು ನಮಗೇಕೆ ಇದು ಸಾಧ್ಯವಾಗುತ್ತಿಲ್ಲ? ಅದರಲ್ಲಿ ಸಾವಿರದ ಒಂದು ಅಂಶವನ್ನಾದರೂ ಸಾಧಿಸಿದರೆ ಬಾಳು ಸಾರ್ಥಕವಾದೀತು.

ಸೋದರಿ ನಿವೇದಿತಾ ಲೇಖನಿ, ಪುಸ್ತಕಗಳನ್ನು ಹಿಡಿದು ಶಿಕ್ಷಕಿ ಯಾಗಿ ಕೇವಲ ಪಾಠಪ್ರವಚನ ನೀಡಲಿಲ್ಲ, ಅನೇಕ ಕಡೆ ವಿಶಿಷ್ಟ ಉಪನ್ಯಾಸಗಳನ್ನೂ ನೀಡಿದಳು. ಭಾರತೀಯ ಸ್ತ್ರೀಯರ ಮೂಢ ನಂಬಿಕೆಗಳನ್ನೂ, ಅಜ್ಞಾನಗಳನ್ನೂ ತೊಡೆದು ಅವರ ಕರ್ತವ್ಯ ಪರತೆಯನ್ನು ಎಚ್ಚರಿಸಿ ವೈಜ್ಞಾನಿಕವಾಗಿ, ವೈಚಾರಿಕವಾಗಿ ಚಿಂತನೆ ಯಲ್ಲಿ ತೊಡಗುವಂತೆ ಪ್ರೇರಣೆ ನೀಡಿದವಳು, ಪಾಶ್ಚಾತ್ಯ ದೇಶದಿಂದ ಬಂದ ಈ ಸೋದರಿ ನಿವೇದಿತಾ! ಸೋದರಿಯ ಕೆಲಸ ಕಾರ್ಯ ಗಳು ಕೇವಲ ಶಿಕ್ಷಕಿಯಾಗಿ, ಉಪನ್ಯಾಸಕಿಯಾಗಿ ಅಥವಾ ಬೋಧಕ ಳಾಗುವಷ್ಟಕ್ಕೇ ಸೀಮಿತಗೊಳ್ಳದೆ, ಕೈಯಲ್ಲಿ ಪೊರಕೆ ಬುಟ್ಟಿ ಹಿಡಿದು ಬೀದಿಗಳನ್ನು ಗುಡಿಸಿ ಸ್ವಚ್ಛಗೊಳಿಸುವವರೆಗೂ ಸಾಗಿದವು. ಒಮ್ಮೆ ಕೊಲ್ಕತಾದಲ್ಲಿ ಪ್ಲೇಗ್ ಹರಡಿದಾಗ ಆಕೆ ಕೈಗೊಂಡ ಸೇವಾಕಾರ್ಯ ಗಳು ಶ್ಲಾಘನೀಯ. ಭಾರತೀಯ ಯುವಜನಾಂಗ ನಾಚಿಕೊಳ್ಳು ವಂಥ ರೀತಿಯಲ್ಲಿ ಆಕೆ ಮಾಡಿದ ಸ್ವಚ್ಛತಾ ಕಾರ್ಯಗಳು ಇಂದಿಗೂ ನಮಗೆ ಮಾದರಿ. ಅಷ್ಟೇ ಅಲ್ಲದೆ, ಸ್ವಯಂಸೇವಕರನ್ನು ಸಂಘಟಿಸಿ ತಂಡತಂಡಗಳನ್ನಾಗಿ ಮಾಡಿ, ಪ್ಲೇಗ್ ಹರಡಿದ ಕಡೆಯಲ್ಲೆಲ್ಲಾ ಓಡಾಡಿ, ರೋಗಿಗಳನ್ನು ಶುಶ್ರೂಷೆಗೈದ ರೀತಿಯೂ ಗಮನಾರ್ಹ. "ನಮ್ಮ ಮಕ್ಕಳು, ಮನೆ, ಸಂಸಾರ" ಎಂಬ ಸ್ವಾರ್ಥದಲ್ಲಿಯೇ ಮುಳುಗಿ ಹೊತ್ತುಕಳೆಯುವ ನಮಗೆ, ನಮ್ಮ ಬೀದಿ ಅಥವಾ ನೆರೆಹೊರೆಯವರ ಕಷ್ಟಸುಖಗಳಲ್ಲಿ ಪಾಲ್ಗೊಳ್ಳುವ ವ್ಯವಧಾನವೂ ಇಲ್ಲದಿರುವಾಗ, ಪಾಶ್ಚಾತ್ಯ ಮಹಿಳೆಯೋರ್ವಳು ಇಲ್ಲಿ ಬಂದು, ಸಮಾಜದ ದೀನದಲಿತರ ಸೇವೆಯಲ್ಲಿ ಸಂಪೂರ್ಣ ತೊಡಗಿದ್ದಳೆಂದರೆ ಸ್ವಾಮಿ ವಿವೇಕಾನಂದರ ಮಾತುಕೃತಿಗಳ ಸ್ಫೂರ್ತಿ ಆಕೆಯ ಮೇಲೆ ಎಷ್ಟು ಪರಿಣಾಮಕಾರಿಯಾಗಿದ್ದಿರಬಹುದು? ಇಲ್ಲಿ ಆಕೆಯ ಸೇವಾಮನೋಭಾವದ ತೀವ್ರತೆಯನ್ನು ನಾವು ಗಮನಿಸಬಹುದು.

ಐರ್ಲೆಂಡ್‌ನವಳಾಗಿದ್ದ ಮಾರ್ಗರೆಟ್ ಭಾರತಕ್ಕೆ ಬಂದ ಮೇಲೆ, ಸ್ವಾಮೀಜಿಯ ಆದೇಶದಂತೆ ಸ್ತ್ರೀಯರ ಉನ್ನತಿ ಮತ್ತು ದೀನದಲಿತರ ಉದ್ಧಾರಕ್ಕಾಗಿ ಶ್ರಮಿಸುತ್ತ ತನ್ನ ಕರ್ತವ್ಯದಲ್ಲಿ ಗಾಢವಾಗಿ